ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ದಿನ ಬಹುಶಃ ಮುಖ್ಯಮಂತ್ರಿಗಳೇ ಪಶ್ಚಾತ್ತಾಪ ಪಡಬೇಕಾಗುತ್ತದೆ. ಎಲ್ಲಾ 224 ಜನ ಶಾಸಕರು, ಇವತ್ತು ಇಲ್ಲಿರುವಂಥವರು ಆ ಕಡೆ ಇರಬಹುದು ಬದಲಾವಣೆಯಾಗಬಹುದು. ಆದರೆ ಮುಂದೆ ಏನು ಮೇಲ್ಪಂಕ್ತಿ ಹಾಕುತ್ತೇವೆ ಎನ್ನುವುದು ಬಹಳ ಮುಖ್ಯವಾದುದು. ಆದ್ದರಿಂದ ಚುನಾಯಿತ ಪ್ರತಿನಿಧಿಗಳಿಗೆ ಒಂದು ಅಪಮಾನ ಮಾಡಿದರೆ ಅದು ನಮಗೆ ಆದ ಅಪಮಾನ ಅಲ್ಲ. ನಮ್ಮನ್ನು ಆಯ್ಕೆ ಮಾಡಿದ ಕಳುಹಿಸಿದ ಜನರಿಗೆ ಮಾಡಿದ ಅಪಮಾನ ಆಗಬಹುದು, ಇದು ಸರ್ವಾಧಿಕಾರಿ ನೀತಿ ಆಗಬಹುದು. ಎಂದು ಜನ ಭಾವಿಸಬಹುದು. ಆ ಕಳಂಕಕ್ಕೆ ತಾವು ಗುರಿಯಾಗಬಾರದು ಎಂಬ ಭಾವನೆ ಇಟ್ಟು ಹೇಳಿದ್ದೇವೆ. ಆದರೆ ತಾವು ಏನೋ ಒಂದು ಗಟ್ಟಿ ಮನಸ್ಸು ಮಾಡಿದ್ದೀರಿ. ತಾವು ಏನು ಬೇಕಾದರೂ ಮಾಡಬಹುದು. ನಾವು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದೇವೆ. ಮತ್ತೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯ ಬರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಮಾತಿಗೂ ಮನ್ನಣೆ ಇಲ್ಲ ಅಂದರೆ,. ಇದು ಅನಿವಾರ್ಯ. ಅದಕ್ಕೆ ನಾವೆಲ್ಲರೂ ಕೂಡ ನಮ್ಮ ಪಕ್ಷದ ವತಿಯಿಂದ ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ಬಹಳ ಅಪಾರವಾದ ಗೌರವ ಇದೆ. ಅದರ ಬಗ್ಗೆ ಬೇರೆ ಮಾತೇ ಇಲ್ಲ.

ಅಧ್ಯಕ್ಷರು : ಶ್ರೀ ಜಯಚಂದ್ರರವರದ್ದು ಒಂದು ಪ್ರಶ್ನೆ ಇದೆ. ಅವರೊಬ್ಬರನ್ನು ಬಿಟ್ಟು ಉಳಿದವರು.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷ, ಕಾಂಗ್ರೆಸ್(ಐ), ಕರ್ನಾಟಕ ಕಾಂಗ್ರೆಸ್ ಪಕ್ಷ, ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ಸದಸ್ಯರೆಲ್ಲರೂ ಸಭೆಯಿಂದ ಹೊರಗೆ ನಡೆದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ : ತುಮಕೂರು ಜಿಲ್ಲಾ ಸಾಕ್ಷರತಾ ಆಂಧೋಲನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 96(390)

ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ತುಮಕೂರು ಜಿಲ್ಲೆ ಸಾಕ್ಷರತಾ ಆಂದೋಲನದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸಾಕ್ಷರತೆಗೆ ಸಂಬಂಧಿಸಿದಂತೆ ಒಟ್ಟು ಮುದ್ರಿತವಾದ ಹೊತ್ತಿಗೆಗಳು : ಪುಸ್ತಕಗಳು ಎಷ್ಟು?

ಅವುಗಳನ್ನು ಯಾರು ಯಾರಿಗೆ ಹಂಚಲಾಗಿದೆ? ಹಂಚಿದವರು ಯಾರು? ಪಡೆದುಕೊಂಡವರು ಯಾರು? ಹಾಗೂ ಪಡೆದುಕೊಂಡ ಒಟ್ಟು ಪುಸ್ತಕಗಳು : ಹೊತ್ತಿಗೆಗಳ ಸಂಖ್ಯೆ ಎಷ್ಟು? ಯಾವ ಯಾವ ದಿನಾಂಕಗಳಲ್ಲಿ ಹಂಚಲಾಗಿದೆ? (ಈ ಬಗ್ಗೆ ಪೂರ್ಣ ವಿವರ ನೀಡುವುದು)

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

1. ಸಾಕ್ಷರತಾ ಅಂದೋಲನ ಕಾರ್ಯಕ್ರಮದಲ್ಲಿ ಅವ್ಯವಹಾರ ನಡೆದಿರುವುದಾಗಿ ದೂರುಗಳು ಬಂದಿದ್ದು ಅವುಗಳ ಸದಸ್ಯರ ಬಗ್ಗೆ ಸರ್ಕಾರದಲ್ಲಿ ಹರಿ ಶೀಲಿಸಲಾಗುತ್ತಿದೆ.

2. ಸಾಕ್ಷರತಾ ಮತ್ತು ಸಾಕ್ಷರೋತ್ತರ ಆಂದೋಲನದಲ್ಲಿ 25,49,550 ಪುಸ್ತಕಗಳನ್ನು ಮುದ್ರಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಇಡಲಾಗಿದೆ.

3. ಇವುಗಳನ್ನು ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ. ವಿವರಗಳನ್ನು ಅನುಬಂಧ (2) ರಲ್ಲಿ ಇಡಲಾಗಿದೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಮಾರಾಟ ನಿಗಮ ನಿಯಮಿತ ಹಾಗೂ ಜಿಲ್ಲಾ ಸಾಕ್ಷರತಾ ಸಮಿತಿಯವರು ತಾಲ್ಲೂಕು ಸಮಿತಿಗಳಿಗೆ ಹಂಚಿರುತ್ತಾರೆ. ತಾಲ್ಲೂಕು ಸಮಿತಿಯವರು ಪಡೆದುಕೊಂಡ ಪುಸ್ತಕಗಳ ಸಂಖ್ಯೆ : 25,44,550 ಉಳಿದ 5,000 ಪ್ರತಿಗಳನ್ನು ಜಿಲ್ಲಾ ಸಮಿತಿಯವರು ನೇರವಾಗಿ ಹಂಚಿರುತ್ತಾರೆ.

ತಾಲ್ಲೂಕು ಸಮಿತಿಗಳಿಗೆ ಹಂಚಲಾದ ಪುಸ್ತಕಗಳು ತದನಂತರ ಗ್ರಾಮ ಪಂಚಾಯಿತಿಗಳ ಮುಖಾಂತರ ಕಲಹಾ ಕೇಂದ್ರಗಳಿಗೆ ಹಂಚಲಾಗಿದೆ.

ಈ ಪುಸ್ತಕಗಳನ್ನು ವಿವಿಧ ದಿನಗಳಲ್ಲಿ ಹಂಚಲಾಗಿದ್ದು ವಿವರಗಳನ್ನು ಅನುಬಂಧ (2)ರಲ್ಲಿ ಇಡಲಾಗಿದೆ.

ಅನುಬಂಧ -1

ಸಾಕ್ಷರ ಸಮಿತಿ, ತುಮಕೂರು, ಇವರು ಈ ಕೆಳಗಿನ ಸಾಕ್ಷರತಾ ಪುಸ್ತಕಗಳನ್ನು: ಹೊತ್ತಿಗೆಗಳನ್ನು ಅವುಗಳ ಎದರು ತೋರಿಸಿರುವ ಸಂಖ್ಯೆಗಳಲ್ಲಿ ಕೆ.ಎಸ್.ಐ.ಎಂ.ಸಿಯವರ ಮೂಲಕ ಮುದ್ರಿಸಿರುತ್ತಾರೆ ಮತ್ತು ಕೊಂಡುಕೊಂಡಿರುತ್ತಾರೆ.

	ಮುದ್ರಿಸಿದ ಪುಸ್ತಕಗಳು	ಸಂಖ್ಯೆ
1.	ಕಲ್ಪತರು ಕಲಿಕಾ ಭಾಗ -1	6,21,075
2.	ಕಲ್ಪತರು ಕಲಿಕಾ ಭಾಗ -2	3,05,425
3.	ಕಲ್ಪತರು ಭಾಗ -3	3,10,000
4.	ಕನ್ನಡ ಕಲಿ ಹಂತ -1	56,150
5.	ಕನ್ನಡ ಕಲಿ ಹಂತ -2	50,000
6.	ಕನ್ನಡ ಕಲಿ ಹಂತ -3(1)	50,000
	ಕನ್ನಡ ಕಲಿ ಹಂತ -3 (2)	50,000
	ಕನ್ನಡ ಕಲಿ ಹಂತ -3 (3)	50,000
7.	ಉರ್ದು ಕಲಿಕ ಭಾಗ -1	29,500
8.	ಉರ್ದು ಕಲಿಕೆ ಭಾಗ -2	20,000
9.	ಉರ್ದು ಕಲಿಕೆ ಭಾಗ -3	15,000
10.	ಸ್ವಯಂ ಸೇವಕರ ಕೈಪಿಡಿ	40,000
11.	ಜ್ಞಾನ ಚಿಲುಮೆ -1	2,74,200

12.	ಜ್ಞಾನವುತ ಕೈಪಿಡಿ	10,000
13.	ಅರಿವಿನ ಅರುಣೋದಯ	10,000
14.	ವೃದ್ಧಿ ಅಭಿವೃದ್ಧಿ	10,000
15.	ಕಲ್ಪಶ್ರೀ (1993)	5,000
16.	ಕಲ್ಪಶ್ರೀ (1994)	6,000
17.	ವೃದ್ಧಿ ಅಭಿವೃದ್ಧಿ ಅರಿವಿನ ಅರುಣೋದಯ2 ಪುಸ್ತಕಗಳು	20,000
18.	ಅಶಾ ಪ್ರಕಾಶನ 3 ಪುಸ್ತಕಗಳು	700
19.	ಬಿಯಾಂಡ್ 3 ಆರ್ಸ್	4,500
20.	ಟ್ರೇಡಿಂಗ್ ನ್ಯೂಪಾತ್ಸ್	1,500

ಕೊಂಡು ಕೊಂಡಿರುವ ಪುಸ್ತಕಗಳು :

21.	ರಾಜ್ಯಪಾಲರ ಸಂಪನ್ಮೂಲ ಕೇಂದ್ರ ಮೈಸೂರು 49 ಪುಸ್ತಕಗಳು ತಲಾ ರೂ.2,500.00 ರಂತೆ	1,22,500
22.	ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು 12 ಪುಸ್ತಕಗಳು ತಲಾ ರೂ. 3,000.00 ರಂತೆ	45,000
23.	ರಾಜ್ಯ ಸಂಪನ್ಮೂಲ ಕೇಂದ್ರ, ನವದೆಹಲಿ 10 ಪುಸ್ತಕಗಳು 1,500 ಪ್ರತಿಗಳು	15,000
24.	ಕೆ.ಎನ್. ಐ.ಎಂ.ಸಿ-ಎನ್. ಬಿ.ಹೆಚ್. ಪ್ರಕಾಶನ 51 ಪುಸ್ತಕಗಳು 6,000	2,75,000
25.	ಕೆ.ಎನ್. ಐ.ಎಂ.ಸಿ. -ಗೀತಾಂಜಲಿ 19 ಪುಸ್ತಕಗಳು 6,000 ರಂತೆ	1,14,000
26.	ಕೆ.ಎನ್.ಐ.ಂ.ಸಿ ಚದುರ ಪ್ರಕಾಶನ 8 ಪುಸ್ತಕಗಳು 5,000 ರಂತೆ	40,000

ಮೇಲೆ ನಮೂಸಿದ ಪುಸ್ತಕಗಳ ಪ್ರತಿ ಈ ಕೆಳಗಿನ ಪುಸ್ತಕಗಳನ್ನು ಕೆ.ಎಸ್.ಐ.ಎಂ.ಸಿ ರವರು ಜಿಲ್ಲಾ ಸಮಿತಿಯವರವಾಗಿ ನೀರವಾಗಿ ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ. ಇದಕ್ಕೆ ಆರು ತಾಲ್ಲೂಕು ಸಾಕ್ಷರ ಸಮಿತಿಗಳಿಂದ ಸ್ವೀಕೃತಿಯನ್ನು ಪಡೆದು ಜಿಲ್ಲಾ ಸಾಕ್ಷರತಾ ಸಮಿತಿಗೆ ಒಪ್ಪಿಸಿರುತ್ತಾರೆ.

1. ಕಲ್ಪತರು ಕಲಿಕಾ ಭಾಗ -1
2. ಕಲ್ಪತರು ಕಲಿಕಾ ಭಾಗ -2
3. ಕಲ್ಪತರು ಕಲಿಕಾ ಭಾಗ -3
4. ಕನ್ನಡ ಕಲಿ ಹಂತ-1
5. ಉರ್ದು ಕಲಿಕೆ ಬಾಗ -1

6. ಉರ್ದು ಕಲಿಕೆ ಬಾಗ -2
7. ಉರ್ದು ಕಲಿಕೆ ಬಾಗ -3
8. ಜ್ಞಾನ ಚಿಲುಮೆ -1
9. ಜ್ಞಾನ ಚಿಲುಮೆ ಕೈಪಿಡಿ

ಉಳಿದ ಪುಸ್ತಕಗಳನ್ನು ಜಿಲ್ಲಾ ಸಾಕ್ಷರತಾ ಸಮಿತಿಯವರು ಪಡೆದ ನಂತರ ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಹಂಚಿರುತ್ತಾರೆ. ಪುಸ್ತಕಗಳನ್ನು ಪಡೆದ ಬಗ್ಗೆ ಮತ್ತು ವಿತರಿಸಿದ ಬಗ್ಗೆ ದಾಖಲೆಗಳನ್ನು ಇಡಲಾಗಿದೆ.

ಆರಂಭದಲ್ಲಿ ಹಂಚುವಾಗ ಸ್ವಲ್ಪ ಪ್ರಮಾಣದ ಕೆಲವು ಪುಸ್ತಕಗಳನ್ನು ಜಿಲ್ಲಾ ಮಟ್ಟದಲ್ಲಿ ಉಳಿಸಿಕೊಳ್ಳಲಾಗಿದ್ದು ಅವುಗಳನ್ನು ಕೂಡ 1995ನೇ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ ಮತ್ತು ಅದರ ಬಗ್ಗೆ ದಾಖಲೆಗಳನ್ನು ಇಡಲಾಗಿದೆ.

ಪುಸ್ತಕಗಳ ಖರೀದಿಸುವಿಕೆಗೆ ಮತ್ತು ಮುದ್ರಿಸುವ ಬಗ್ಗೆ ಇರುವ ದಾಖಲಾತಿಗಳ ಪ್ರತಿಗಳನ್ನು ಇಲಾಖೆಯಲ್ಲಿ ಇಟ್ಟುಕೊಳ್ಳಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ, ತಾಲ್ಲೂಕು ಮತ್ತು ಜಿಲ್ಲಾ ಸಾಕ್ಷರತಾ ಸಮಿತಿಯ ವಿತರಣಾ ಪಟ್ಟಿಯಲ್ಲಿ ತೋರಿಸಿದಂತೆ ಮುದ್ರಿಸಿರುವ ಮತ್ತು ಖರೀದಿಸಿರುವ ಪುಸ್ತಕಗಳು : ಹೊತ್ತಿಗೆಗಳು ಹಾಗೂ ಅವುಗಳ ವಿತರಣೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ

ಕ್ರ ಸಂ	ಸಾಕ್ಷರತೆಗೆ ಸಂಬಂಧಿಸಿದಂತೆ ಒಟ್ಟು ಮುದ್ರಿತಪುಸ್ತಕಗಳು:ಹೊತ್ತಿಗೆಗಳು ಎಷ್ಟು? ಪುಸ್ತಕದಹೆಸರು ಸಂಖ್ಯೆ		ಅವುಗಳನ್ನು ಯಾರಿಗೆ ಹಂಚಲಾಗಿದೆ?	ಹಂಚಿದವರುಯಾರು?
1	2		3	4
1.	ಕಲ್ಪತರು ಕಲಿಕೆ ಭಾಗ 1	6,21,075	ತಾಲ್ಲೂಕು ಸಾಕ್ಷರತಾ ಸಮಿತಿಗೆ ಹಂಚಲಾಗಿದೆ ಮತ್ತು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಿಗೆ.	ಕೆ.ಎಸ್.ಐ.ಎಂ.ಸಿಯವರು ಗೀತಾಂಜಲಿ ಪ್ರಿಂಟರ್ಸ್‌ರವರ ಮೂಲಕ ಜಿಲ್ಲಾಸಾಕ್ಷರತಾ ಸಮಿತಿಯ ಆದೇಶದ ಮೇರೆಗೆ ಹಂಚಿದ್ದಾರೆ.
2.	ಕಲ್ಪತರು ಕಲಿಕೆ ಭಾಗ 2	3,05,425	ತಾಲ್ಲೂಕು ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ	-ಮೇಲಿನಂತೆ-
3.	ಕಲ್ಪತರು ಕಲಿಕೆ ಭಾಗ 3	3,10,000	ತಾಲ್ಲೂಕ್ ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ.	ಕೆ.ಎಸ್.ಐ.ಎಂ.ಸಿ.ಯವರು ಗೀತಾಂಜಲಿ ಪ್ರಿಂಟರ್ಸ್‌ರವರ

390 ಕ್ಕೆ ಸಂಬಂಧಿಸಿದ ಅನುಬಂಧ -2

ಪಡೆದುಕೊಂಡವರು ಯಾರು?	ಪಡೆದುಕೊಂಡ ಒಟ್ಟುಪುಸ್ತಕ ಗಳು: ಹೊತ್ತಿಗೆ ಗಳಸಂಖ್ಯೆ ಎಷ್ಟು?	ಯಾವಯಾವ ದಿನಾಂಕದಿಂದ ಹಂಚಲಾಗಿದೆ?	ಷರಾ
5	6	7	8
10 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳು ಮತ್ತು ಜಿಲ್ಲಾ ಶಿಕ್ಷಣಾಧಿಕಾರಿಗಳು	6,21,075	19.12.91 03.01.92 26.03.92 20.03.92 21.03.92 26.03.92 09.04.92 10.04.92 29.09.92 01.10.92 04.10.92 11.0.92 12.10.92	ಇದರಲ್ಲಿ 53,000 ಪುಸ್ತಕ ಗಳು ಜಿಲ್ಲಾ ಕಛೇರಿಗೆ ಸರಬರಾಜು ಆಗಿರುತ್ತದೆ.
10 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳು	3,05,425	21.04.92 16.05.92 03.06.92 14.09.92 11.11.92 16.11.92 19.11.92 21.11.92 24.11.92 30.11.92	
20 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳು	3,10,000	03.11.92 04.11.92 07.11.92 11.11.92 16.11.92 19.11.92 21.11.92 24.11.92 30.11.92 30.04.92	

1	2		3	4
4.	ಕನ್ನಡಕಲಿಹಂತ ಭಾಗ 1	55,150	-ಮೇಲಿನಂತೆ-	-ಮೇಲಿನಂತೆ-
5.	ಕನ್ನಡಕಲಿಹಂತ ಭಾಗ 2	50,000	-ಮೇಲಿನಂತೆ-	ಜಿಲ್ಲಾ ಸಾಕ್ಷರತಾ ಸಮಿತಿ
6.	ಕನ್ನಡ ಕಲಿ 3(1) ಕನ್ನಡ ಕಲಿ 3(2) 3(3)	50,000 50.000 50,000	-ಮೇಲಿನಂತೆ-	-ಮೇಲಿನಂತೆ-
7.	ಉರ್ದು ಕಲಿಕೆ ಭಾಗ 1	29,500	ತಾಲ್ಲೂಕ್ ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ	ಕೆ.ಎಸ್.ಐ.ಎಂ.ಸಿಯವರು ಗೀತಾಂಜಲಿ ಪ್ರಿಂಟರ್ಸ್ ಮೂಲಕ ಜಿಲ್ಲಾಸಾಕ್ಷರತಾ ಸಮಿತಿ ಆದೇಶದ ಮೇರೆಗೆ ಹಂಚಿರುತ್ತಾರೆ.
8.	ಉರ್ದುಕಲಿಕೆ ಭಾಗ 2	20,000	-ಮೇಲಿನಂತೆ-	-ಮೇಲಿನಂತೆ-
9.	ಉರ್ದುಕಲಿಕೆ ಭಾಗ 3	15,000	-ಮೇಲಿನಂತೆ-	-ಮೇಲಿನಂತೆ-
10.	ಸ್ವಯಂಸೇವಕರ ಕೈಪಿಡಿ	40,000	-ಮೇಲಿನಂತೆ-	ಕೆ.ಎಸ್.ಐ.ಎಂ.ಸಿ ಯವರು ಟೆಕ್ನೋ ಪ್ರಿಂಟರ್ಸ್ ಬೆಂಗಳೂರುರವರ ಮೂಲಕ ಜಿಲ್ಲಾ ಸಾಕ್ಷರತಾ ಸಮಿತಿ ಆದೇಶದಂತೆ ಹಂಚಿದ್ದಾರೆ.
11.	ಜ್ಞಾನಚಿಲುಮೆ ಕಲಿಕೆ -1	2,74,200	100 ತಾಲ್ಲೂಕುಗಳ ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ.	ಕೆ.ಎಸ್.ಐ.ಎಂ.ಸಿ ಯವರು ಗೀತಾಂ ಜಲಿ ಪ್ರಿಂಟರ್ಸ್ ಮತ್ತು ಟೆಕ್ನೋ

5	6	7	8
-ಮೇಲಿನಂತೆ-	50,150 5,000 ಜಿಲ್ಲೆ ಸಾಕ್ಷರತಾ ನಿಮಿತಿಯಲ್ಲಿ ರಿಸರ್ವ್ ಇಡ ಲಾಗಿತ್ತು	20.03.92 21.03.92 26.03.92 09.04.92 10.04.92	ಇದರಲ್ಲಿ 5,000 ಪುಸ್ತಕಗಳು ಜಿಲ್ಲಾ ಸಾಕ್ಷರತಾ ಕಛೇರಿಗೆ ಸರಬ ರಾಜು ಆಗಿರುತ್ತದೆ
-ಮೇಲಿನಂತೆ-	45,580 4,420 ಜಿಲ್ಲಾ ಸಾಕ್ಷರತಾ ಸಮಿತಿ ಯಲ್ಲಿರಿಸಲಾಗಿತ್ತು.	27.08.93	4420 ಪುಸ್ತಕ ಗಳು ಜಿಲ್ಲಾ ಸಮಿತಿಯ
-ಮೇಲಿನಂತೆ-	1,15,500 34,500 ಜಿಲ್ಲಾ ಸಾಕ್ಷರತಾ ಸಮಿತಿಯಲ್ಲಿದೆ.	25.8.94 03.9.94	34,500 ಪುಸ್ತಕ ಗಳು ಜಿಲ್ಲಾ ಸಮಿತಿಯ ಲೆಕ್ಕದಲ್ಲಿದೆ.
10 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳು ಪಡೆದುಕೊಂಡಿವೆ	29,500	20.03.92 21.03.92 26.03.92 09.04.92 10.04.92	-
-ಮೇಲಿನಂತೆ-	20,000	14,00.92 30.04.92	-
-ಮೇಲಿನಂತೆ-	15,000	30.04.92 10.9.92	-
-ಮೇಲಿನಂತೆ-	40,000	16.03.92	
10 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳು	2,74,200	25-08-93 27-08-93 06-09-93 8-06-93	ಈ ಪುಸ್ತಕಗಳ ಪೈಕಿ 7800 ಜಿಲ್ಲಾ ಸಮಿತಿಯ ಲೆಕ್ಕದಲ್ಲಿದೆ

1	2		3	4
				ಪ್ರಿಂಟರ್ಸ್ ಬೆಂಗಳೂರು ರವರ ಮೂಲಕ ಜಿಲ್ಲಾ ಸಾಕ್ಷರತಾ ಸಮಿತಿ ಆದೇಶದ ಮೇರೆಗೆ ಹಂಚಿರುತ್ತಾರೆ.
12.	ಜ್ಞಾನಾಮೃತ ಕೈಪಿಡಿ	10,000	-ಮೇಲಿನಂತೆ-	-ಮೇಲಿನಂತೆ-
13.	ಅರಿವಿನ ಆರುಣೋದಯ	10,000	-ಮೇಲಿನಂತೆ-	ಜಿಲ್ಲಾ ಸಾಕ್ಷರತಾ ಸಮಿತಿ
14.	ವೃದ್ಧಿ ಅಭಿವೃದ್ಧಿ	10,000	-ಮೇಲಿನಂತೆ-	-ಮೇಲಿನಂತೆ-
15.	ಕಲ್ಪಶ್ರೀ (1993) (ವಿಚಾರಾಮೃತ)	5,000	-ಮೇಲಿನಂತೆ-	-ಮೇಲಿನಂತೆ-
16.	ಕಲ್ಪಶ್ರೀ (1994) (ಕಲ್ಲು ಮೃದು ವಾದಾಗ)	6,000	-ಮೇಲಿನಂತೆ-	-ಮೇಲಿನಂತೆ-
17.	ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ 49 ಪುಸ್ತಕಗಳು ತಲಾ 2500 ರಂತೆ	1,22,500	10 ತಾಲ್ಲೂಕುಗಳಿಗೆ ಸಾಕ್ಷರತಾ ಸಮಿತಿಗಳಿಗೆ	-ಮೇಲಿನಂತೆ- ಹಂಚಿರುತ್ತಾರೆ.

5	6	7	8
		16-07-93 14-07-93 15-07-93	
-ಮೇಲಿನಂತೆ-	10,000-	ಮೇಲಿನಂತೆ-	1300 ಜಿಲ್ಲಾ ಸಮಿತಿಯ ಲೆಕ್ಕದಲ್ಲಿದೆ.
-ಮೇಲಿನಂತೆ-	10,000-	ಮೇಲಿನಂತೆ-	ಗ್ರಾಮ ಪಂಚಾಯಿತ್ ಸದಸ್ಯರ ತರಬೇತಿಗೆ ಉಪಯೋಗಿ ಸಲಾಗಿದೆ ಎಂದು ತಿಳಿಸಿರುತ್ತಾರೆ.
-ಮೇಲಿನಂತೆ-	10,000	-ಮೇಲಿನಂತೆ-	-ಮೇಲಿನಂತೆ-
ತಾಲ್ಲೂಕುಗಳ ಸಾಕ್ಷರತಾ ಸಮಿತಿಗಳು ಜಿಲ್ಲಾಮಟ್ಟದ ರಾಜ್ಯಮಟ್ಟದ ಕೇಂದ್ರ ಮಟ್ಟದ ಕಛೇರಿಗಳಿಗೆ ಸಂಸ್ಥೆಗಳಿಗೆ	5,000		ಪ್ರಚಾರ ಸಾಮಗ್ರಿ ಯಾಗಿ ಉಪಯೋಗಿ ಸಲಾಗಿದೆ ಎಂದು ತಿಳಿದು ಎಂದಿದೆ
-ಮೇಲಿನಂತೆ-	6,000	-ಮೇಲಿನಂತೆ-	-ಮೇಲಿನಂತೆ-
ತಾಲ್ಲೂಕು ಸಾಕ್ಷರತಾ ಸಮಿತಿಗಳು	1,22,500	15-07-93 27-08-93 02-09-93 10-03-94 01-09-93 29-09-94 11-11-94	-ಮೇಲಿನಂತೆ-

1	2	3	4
18.	ರಾಜ್ಯ ಸಂಪನ್ಮೂಲ ಕೇಂದ್ರ ನವದಹೆಲಿಯವರ ಉರ್ದುಪುಸ್ತಕ 15,000	-ಮೇಲಿನಂತೆ-	ಜಿಲ್ಲಾ ಸಾಕ್ಷರತಾ
19.	ರಾಜ್ಯ ಸಂಪನ್ಮೂಲ ಕೇಂದ್ರ ಮೈಸೂರು ಇವರ 12 ಪುಸ್ತಕ ಗಳು ತಲಾ 3,000 ರಂತೆ 45,000	10 ತಾಲ್ಲೂಕುಗಳಿಗೆ ಸಾಕ್ಷರತಾ ಸಮಿತಿಗೆ ಹಂಚಲಾಗಿದೆ.	-ಮೇಲಿನಂತೆ-
20.	1) ಎಸ್.ಬಿ.ಎಸ್. ಪಬ್ಲಿಕೇಷನ್ ಬೆಂಗಳೂರು 31 ರವರ ಟೈಬಲ್ಸ್ ಗಳು ಮತ್ತು (31 5000) 1,55,000	-ಮೇಲಿನಂತೆ-	-ಮೇಲಿನಂತೆ-
	2) -ಮೇಲಿನಂತೆ - 20 ಟೈಬಲ್ಸ್‌ಗಳು (20 6000)	-ಮೇಲಿನಂತೆ-	-ಮೇಲಿನಂತೆ-
	3) ಗೀತಾಂಜಲಿ ಪ್ರಿಂಟರ್ಸ್‌ರವರ 7 ಟೈಟಲ್ಸ್‌ಗಳು (7 6000) 42,000	10 ತಾಲ್ಲೂಕು ಗಳ ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ	ಜಿಲ್ಲಾ ಸಾಕ್ಷರತಾ ಸಮಿತಿ ತುಮಕೂರು
	-ಮೇಲಿನಂತೆ- 10 ಟೈಟ್‌ಲ್ಸ್‌ಗಳ (10 60000) 60,000	-ಮೇಲಿನಂತೆ-	-ಮೇಲಿನಂತೆ-
	-ಮೇಲಿನಂತೆ- 2 ಟೈಟಲ್ಸ್‌ಗಳು (2 6000) 12,000	-ಮೇಲಿನಂತೆ-	-ಮೇಲಿನಂತೆ-

5	6	7	8
-ಮೇಲಿನಂತೆ-	15,000	-ಮೇಲಿನಂತೆ-	-ಮೇಲಿನಂತೆ-
-ಮೇಲಿನಂತೆ-	45,000	-ಮೇಲಿನಂತೆ-	-ಮೇಲಿನಂತೆ-
-ಮೇಲಿನಂತೆ-	1,55,00 (37,720 ಪುಸ್ತಕ ಗಳನ್ನು ಜಿಲ್ಲಾ ಸಮಿತಿಯೇ ಬಳಸಿ ಕೊಳ್ಳಲಾಗಿತ್ತು)	15-09-93 27-08-93 02-09-93 10-03-94 01-09-94 29-09-94 11-11-94	ಬಳಕೆ ಪುಸ್ತಕಗಳನ್ನು ಜನವರಿ 95 ಫೆಬ್ರವರಿ 95 ರಂದು ತಾಲ್ಲೂಕುಗಳಿಗೆ ಹಂಚಲಾಗಿದೆ.
-ಮೇಲಿನಂತೆ-	1,20,000 (2000 ಪುಸ್ತಕಗಳನ್ನು ಜಿಲ್ಲಾ ಸಮಿತಿಯಲ್ಲಿ ಬಳಸಿಕೊಳ್ಳಲಾಗುತ್ತೆ)	-ಮೇಲಿನಂತೆ-	-ಮೇಲಿನಂತೆ-
ತಾಲ್ಲೂಕು ಸಾಕ್ಷರತಾ ಸಮಿತಿಗಳು	42,000	15.09.93 27.08.93 02.09.93 10.03.94 01.09.94 29.09.94 11.11.94	ಬಳಕೆ ಪುಸ್ತಕಗಳನ್ನು ಜನವರಿ 9 ಮತ್ತು ಫೆಬ್ರವರಿ 95 ರಂದು ತಾಲ್ಲೂಕುಗಳಿಗೆ ಹಂಚಲಾಗಿದೆ.
-ಮೇಲಿನಂತೆ-	60,000 (1200 ಪುಸ್ತಕ ಗಳನ್ನು ಜಿಲ್ಲಾ ಸಮಿತಿಯಲ್ಲಿ ಬಳಸಿಕೊಳ್ಳಲಾಗಿತ್ತು)	-ಮೇಲಿನಂತೆ-	ಪುಸ್ತಕಗಳನ್ನು ಫೆಬ್ರವರಿ 95ರಲ್ಲಿ ತಾಲ್ಲೂಕುಗಳಿಗೆ ಹಂಚಲಾಗಿದೆ
-ಮೇಲಿನಂತೆ-	12,000	-ಮೇಲಿನಂತೆ-	-

1	2		3	4
22.	ಚತುರಾ ಪ್ರಕಾಶನ ಬೆಂಗಳೂರು 8 ಟೈಟಲ್ಸ್‌ಗಳು (8 5000)	40,000	-ಮೇಲಿನಂತೆ-	-ಮೇಲಿನಂತೆ-
23.	ವೃದ್ಧಿ ಅಭಿವೃದ್ಧಿ ಅರಿವಿನ ಅರುಣೋದಯ	10,000 10,000	ತಾಲ್ಲೂಕ್ ಸಾಕ್ಷರತಾ ಸಮಿತಿಗಳಿಗೆ ಹಂಚಲಾಗಿದೆ.	ಜಿಲ್ಲಾ ಸಾಕ್ಷರತಾ ಸಮಿತಿ
24.	1) ಕೊಟ್ಟ	200	ತಾಲ್ಲೂಕ್ ಕೋ-ಆರ್ಡಿ ನೇಟರ್ಸ್‌ಗಳಿಗೆ ಹಂಚಲಾಗಿದೆ	-ಮೇಲಿನಂತೆ-
	2) ಸುಳಿಗಾಳಿ	250	-ಮೇಲಿನಂತೆ-	-ಮೇಲಿನಂತೆ-
	3) ಗೀತಾಮೃತ	250	-ಮೇಲಿನಂತೆ-	-ಮೇಲಿನಂತೆ-
25.	ಬಿಯಾಂಡ್ 3 ಆಡ್ಸ್	4500	ತಾಲ್ಲೂಕ್ ಸಮಿತಿಗಳಿಗೆ ಹಂಚಿದೆ. ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ, ಕೇಂದ್ರ ಇತರೆ ಸಂಘಸಂಸ್ಥೆ ಗಳಿಗೆ ಹಂಚಿದೆ	-ಮೇಲಿನಂತೆ-
26.	ಟ್ರೇಡಿಂಗ್ ಟು ನ್ಯೂಪಾನ್ಸ್	1500	-ಮೇಲಿನಂತೆ-	-ಮೇಲಿನಂತೆ-

5	6	7	8
-ಮೇಲಿನಂತೆ-	40,000 (7200 ಪುಸ್ತಕಗಳನ್ನು ಜಿಲ್ಲಾ ಸಮಿತಿಗಳಲ್ಲಿ ಉಳಿಸಿಕೊಳ್ಳಲಾಗಿತ್ತು	-ಮೇಲಿನಂತೆ-	ಉಳಿದ 1995ನೇ ಇಸವಿ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಹಂಚಲಾಗಿದೆ.
ತಾಲ್ಲೂಕು ಸಮಿತಿಗಳು ಗ್ರಾಮಪಂಚಾಯಿತಿ	10,000 10,000	15.09.93 27.08.93 02.09.93 10.03.94 01.09.94 29.09.94 11.11.94	-
ತಾಲ್ಲೂಕ್ ಕೋ- ಅಡಿನೇಟರ್ಸ್ ಹಾಗೂ ಇತರ ಅಧಿಕಾರಿಗಳು	200	01.09.94 11.09.94 29.09.94	ಕ್ರಮವಾಗಿ 14,49,49 ಪುಸ್ತ ಗಳು ಜಿಲ್ಲಾ ಮ ದಲ್ಲಿ ಉಳಿದಿರುತ್ತ
-ಮೇಲಿನಂತೆ- -ಮೇಲಿನಂತೆ-	250 250	-ಮೇಲಿನಂತೆ- -ಮೇಲಿನಂತೆ-	
ತಾಲ್ಲೂಕುಸಮಿತಿ ಹಾಗೂ ಇತರೆಯವರು	1000 (3500 ಪುಸ್ತಕಗಳನ್ನು ಜಿಲ್ಲಾ ಸಮಿತಿಯಲ್ಲಿ ಬಳಸಿಕೊಳ್ಳಲಾಗಿದ)	ಡಿಸೆಂಬರ್ ಮತ್ತು ಜನವರಿ 95ರ ಹಾಗೂ ನಂತರ ಕಳುಹಿಸಲಾಗಿದೆ.	1000 ಪುಸ್ತಕ ಗಳನ್ನು ತಾಲ್ಲೂಕಿ ಹಂಚಲಾಗಿದೆ ಉಳ ಪುಸ್ತಕಗಳನ್ನು ಜಿಲ್ಲಾ ಮಟ್ಟದಲ್ಲಿ ಹಂಚಲಾಗಿದೆ. ಎಂಬುದಾಗಿ ತಿಳಿಸಿದರು.
-ಮೇಲಿನಂತೆ-	ಜಿಲ್ಲಾ ಸಮಿತಿಯಲ್ಲಿ ಹಂಚಲಾಗಿದೆ.	-ಮೇಲಿನಂತೆ-	-

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ದೂರುಗಳು ಬಂದಿವೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎನ್ನತಕ್ಕಂತಹ ಮಾತನ್ನು ಒಪ್ಪಿಕೊಂಡಿದ್ದಾರೆ. ನಾನು ಒಂದು ವಿವರಣೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದು ಯಾವ ರೀತಿಯಾದ ವಿಚಾರ ನಿಮ್ಮ ಗಮನಕ್ಕೆ ಬಂದಿರತಕ್ಕಂತದದ್ದು? ಪರಿಶೀಲನೆ ಅಂದರೆ ಯಾರಿಂದ ಪರಿಶೀಲನೆ ಮಾಡಿಸುತ್ತಿದ್ದೀರಿ? ತಾವೇ ಸ್ವತಃ ಮಾಡುತ್ತಿದ್ದೀರೋ ಅಥವಾ ಯಾರಿಂದಲೋ ಮಾಡಿಸುತ್ತಿದ್ದೀರೋ ಅದಕ್ಕೆ ಏನಾದರೂ ಒಂದು ಸಮಿತಿ ಮಾಡಿದ್ದೀರೋ ಅಥವಾ ಯಾರೋ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೀರೋ ಎಂಬುದನ್ನು ವಿಷದವಾಗಿ ತಿಳಿಸಬೇಕು. ಎರಡನೆಯದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಂದು ಒಡಂಬಡಿಕೆಯಿಂದಾಗಿ ಈ ಕಾರ್ಯಕ್ರಮ ಈ ಯೋಜನೆ ಮಾಡಿ ಬಂದಿರತಕ್ಕಂತದ್ದು. ಇದಕ್ಕೆ ಯಾವ ಬಾಬಿನಲ್ಲೂ ಕೂಡ ಹಣವನ್ನು ಖರ್ಚು ಮಾಡಬೇಕಾದರೆ ಇಂತಿಂತಹ ಬಾಬಿಗೆ ಇಂತಿಷ್ಟು ಹಣವನ್ನು ಖರ್ಚು ಮಾಡಬೇಕು ಎಂಬುದು ತೀರ್ಮಾನವಾಗಿರತಕ್ಕಂತಹದ್ದು. ಆ ತೀರ್ಮಾನದ ಪ್ರಕಾರ ಹಣ ಖರ್ಚಾಗಿದೆಯೇ? ವಿನಿಯೋಗ ಆಗಿದೆಯೇ ಅನ್ನತಕ್ಕಂಥಹದ್ದನ್ನು ತಾವು ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಜಿ.ಗೋವಿಂದಗೌಡ: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಪತ್ರಿಕೆಯಲ್ಲಿ ಕೆಲವು ಮಾಹಿತಿಗಳು ಬಂದಿತ್ತು. ಪತ್ರಿಕೆಯಲ್ಲಿ ಬಂದಿರತಕ್ಕಂತಹದ್ದನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಮತ್ತು ಸದಸ್ಯರು ಸಹ ಇದರ ಬಗ್ಗೆ ದೂರು ಸಲ್ಲಿಸಿರುವುದರಿಂದ, ಇದನ್ನು ಕೂಲಂಕುಷವಾಗಿ ವಿಮರ್ಶೆ ಮಾಡಿ ಏನು ವ್ಯತ್ಯಾಸಗಳಾಗಿವೆ ಎಂದು ತೀರ್ಮಾನ ಮಾಡಬೇಕೆಂದು ಅಧಿಕಾರವನ್ನು ಕೊಟ್ಟು ಕೂಡಲೇ ಸಮಜಾಯಿಸಿ ಕೊಡಬೇಕು ಏನೇನು ವ್ಯತ್ಯಾಸಗಳಾಗಿವೆ ಎಂಬುದಾಗಿ ಕೇಳಿರತಕ್ಕಂತಹದ್ದು ತಮ್ಮ ಮೊದಲನೆ ಪ್ರಶ್ನೆ. 2ನೆಯದಾಗಿ, ಈ ಸಮಿತಿಗಳಲ್ಲಿ ಏನು ತೀರ್ಮಾನವಾಗಿದೆ, ಆ ತೀರ್ಮಾನದ ಪ್ರಕಾರ ಈ ಕಾರ್ಯಕ್ರಮಗಳನ್ನೆಲ್ಲಾ ಕೈಗೊಂಡಿರತಕ್ಕಂತಹದ್ದು. ಯಾವುದೇ ಒಬ್ಬ ಅಧಿಕಾರಿ ನೇರವಾಗಿ ಈ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಸಮಿತಿಯವರ ತೀರ್ಮಾನದ ಪ್ರಕಾರ ಯಾರ್ಯಾರಿಗೆ ಏನೇನು ಜವಾಬ್ದಾರಿಯನ್ನು ವಹಿಸಿದ್ದಾರೋ ಆ ಜವಾಬ್ದಾರಿಯನ್ನು ನಿರ್ವಹಿಸತಕ್ಕ ಜವಾಬ್ದಾರಿ ಅಧಿಕಾರಿಗಳದ್ದು. ಮತ್ತು ಸಮಿತಿ ತೀರ್ಮಾನದ ಪ್ರಕಾರ ಕೆಲಸ ಮಾಡಿರತಕ್ಕಂಥಹದ್ದು.

ಶ್ರೀ ಟಿ.ಬಿ.ಜಯಚಂದ್ರ: ನನ್ನ ಪ್ರಶ್ನೆ ಏನೆಂದರೆ, ಯಾವ್ಯಾವ ಬಾಬಿನಲ್ಲಿ ಎಷ್ಟೇಷ್ಟು ಹಣವನ್ನು ಎಲ್ಲಾ ಬಾಬುಗಳನ್ನು ಸೇರಿಸಿ ಸುಮಾರು 6 ಕೋಟಿ 70 ಲಕ್ಷ ರೂಪಾಯಿಗಳನ್ನು ತುಮಕೂರು ಜಿಲ್ಲೆಗೆ ತಾವು ಕೊಟ್ಟಿದ್ದೀರಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ. ಯಾವ್ಯಾವ ಯೋಜನೆಗಳಿಗೆ ಎಷ್ಟು ಎಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ಇದೆಯಲ್ಲಾ, ಅದರಂತೆ ಖರ್ಚು ಮಾಡಿದ್ದಾರೆಯೇ ಎನ್ನತಕ್ಕ ಮಾತನ್ನು ಕೇಳಿದ್ದೇನೆ. ಅದರ ಬಗ್ಗೆ ತಮಗೆ ಮಾಹಿತಿ ಇಲ್ಲ. ಸಾಕ್ಷರತ ಸಮಿತಿಯಲ್ಲಿ ನಾನೂ ಕೂಡ ಸದಸ್ಯ. ನನಗೂ ಗೊತ್ತಿರತಕ್ಕಂತಹದ್ದು ನಾನು ನೇರವಾಗಿ ಅನೇಕ ಸಂದರ್ಭಗಳಲ್ಲೂ ಕೂಡ ಆರೋಪಗಳನ್ನು ಮಾಡಿದ್ದೇನೆ. ಅದರ

ಬಗ್ಗೆ ಯಾವುದೇ ರೀತಿಯಾದ ಪ್ರತಿಕ್ರಿಯೆ ಯಾರಿಂದಲೂ ಕೂಡ ಬರಲಿಲ್ಲ. ನಾನು ನೇರವಾಗಿ ಚಾರ್ಜು ಮಾಡುತ್ತಿದ್ದೇ. ತಾವು ಇಲ್ಲಿ, ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನನ್ನ ಪ್ರಶ್ನೆಯನ್ನು 2 ಸಾರಿ ತಡೆಹಿಡಿಯುವಂತಹ ಪ್ರಸಂಗ ಬಂತು. ಇದರ ಬಗ್ಗೆ ನಾನು ತಮ್ಮನ್ನು ಅಭಿನಂದಿಸಬೇಕಾಗುತ್ತದೆ. ತಾವು ಯಾವಾಗ ಈ ಸಭೆಯಲ್ಲಿ ಒತ್ತಾಯ ಮಾಡಿದಿರೋ ಆಗ ಇಲ್ಲಿಂದ ಹೋಗಿ, ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡತಕ್ಕ ಕೆಲಸವನ್ನು ಮಾಡಿದರು. ಎಲ್ಲೆಲ್ಲಿ ರಿಜಿಸ್ಟರ್ ಮಾಡಿದ್ದಾರೋ, ಅಲ್ಲೆಲ್ಲಾ ನನಗೆ ದೂರವಾಣಿ ಹೇಳಿದರು, ಇಂತಹ ಒತ್ತಾಯಕ್ಕೋಸ್ಕರ ನಾವು ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡಬೇಕಾಗಿ ಬಂತು ಎಂದು ತಾಲ್ಲೂಕು ಸಾಕ್ಷರತಾ ಸಮಿತಿಗಳು ಇವೆ ಅನೇಕ ಪುಸ್ತಕಗಳು ಬಂದಿವೆ, ಅವುಗಳನ್ನು ಯಾರು ರಿಸೀವ್ ಮಾಡಿದರು? ಯಾವಾಗ ಮಾಡಿದರು ಎನ್ನುವ ವಿಚಾರದ ಬಗ್ಗೆ ವಿಚಾರಣೆ ಮಾಡಿದರೆ, 100ಕ್ಕೆ 100 ರಷ್ಟು ಸತ್ಯಾಂಶ ಹೊರಗೆ ಬರುತ್ತದೆ. ಇವುಗಳನ್ನು ಯಾರಿಗೋಸ್ಕರ ಕೊಡುತ್ತಾ ಇರತಕ್ಕಂತಹದ್ದು, ಬಡವರ ಮಕ್ಕಳಿಗೋಸ್ಕರ, ಬಡವರಿಗೋಸ್ಕರ ಇರತಕ್ಕಂತಹದ್ದು. ಈ ರೀತಿಯಾಗಿ ಇರತಕ್ಕಂತಹ ಕಾರ್ಯಕ್ರಮದಲ್ಲಿ ಅನಕ್ಷರಸ್ಥರಿಗೆ ಕೊಡತಕ್ಕಂತಹ ಕಾರ್ಯಕ್ರಮದಲ್ಲಿ, ಇಂತಹ ಅವ್ಯವಹಾರವಾಗುತ್ತಿದೆ ಎಂಬುದನ್ನು ನೇರವಾಗಿ ಆರೋಪ ಮಾಡಿದರೂ ಕೂಡ ತಾವು ಒಪ್ಪದೆ ಇದ್ದರೆ, ತಮ್ಮ ಗಮನಕ್ಕೆ ಬಂದಿಲ್ಲ ಎನ್ನುವ ಮಾತನ್ನು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ. ತಮ್ಮ ಯೋಜನೆ ಪ್ರಕಾರ ನ್ಯೂಸ್ ಪೇಪರ್, ಜೆ.ಟಿ.ಕೆ. ಸೆಂಟರ್ಸ್‌ಗೆ ಕಲಿಕಾ ಕೇಂದ್ರಗಳಿಗೆ ಒದಗಿಸಬೇಕು. ಅಂತ ಹೇಳಿ 47 ಲಕ್ಷ ರೂಪಾಯಿಗಳಲ್ಲಿ ಒಂದು ರೂಪಾಯಿಯನ್ನೂ ಖರ್ಚು ಮಾಡದೆ ದುರುಪಯೋಗ ಮಾಡಿದ್ದಾರೆ. ಅದೇ ರೀತಿ ವೊಕೇಷ್ನಲ್ ಟ್ರೇನಿಂಗ್ ಕೋರ್ಸಸ್ ಮಾಡುವುದಕ್ಕೋಸ್ಕರ 37 ಲಕ್ಷ ರೂಪಾಯಿಗಳಲ್ಲಿ ಒಂದು ರೂಪಾಯಿಯನ್ನು ಖರ್ಚು ಮಾಡದೆ ದುರುಪಯೋಗ ಮಾಡಿದ್ದಾರೆ. ಅದೇ ರೀತಿ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಕೋ-ಆರ್ಡಿನೇಟರ್ಸ್ ಎಂದು ಇರುತ್ತಾರೆ. ಅವರಿಗೆ 1800 ರೂಪಾಯಿಗಳನ್ನು ಕೊಡಬೇಕು ಎಂಬ ಯೋಜನೆ ಇದ್ದರೆ, ಕೊಟ್ಟಿರತಕ್ಕಂತಹದ್ದು 1200 ರೂಪಾಯಿಗಳು 1100 ರೂಪಾಯಿಗಳನ್ನು ಕೊಡುವ ಕಡೆ 500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಮೇಲೆ ಸರ್ವೆ ಮಾಡಿಸುವುದಕ್ಕೆ ಎಂದು 3 ಲಕ್ಷ ರೂಪಾಯಿಗಳನ್ನಿಟ್ಟಿದ್ದಾರೆ. ಸರ್ವೆಯನ್ನೇ ಮಾಡಿಸಿಲ್ಲ. ಎಲ್ಲದಕ್ಕೂ ಕೂಡ, ಆ ಬಾಬಿನಡಿಯಲ್ಲಿ ಬಿಲ್ಲುಗಳು ಪಾಸಾಗಿವೆ. ಆದರೆ ಕೆಲಸ ಆಗಿಲ್ಲ.

ಶ್ರೀ ಹೆಚ್.ಜಿ. ಗೋವಿಂದಗೌಡ: ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಬಹುಶಃ ಪ್ರಶ್ನೆ ಏನು ಕೇಳಿದ್ದಾರೆ ಅಂತ ಮಾನ್ಯ ಶಾಸಕರುಗಳಿಗೆ ಹಾಗೂ ಅಧ್ಯಕ್ಷರಿಗೆ ಗೊತ್ತಾದರೆ ಒಳ್ಳೆಯದು ಅಂತ ಹೇಳಿ, ಓದುವುದಕ್ಕೆ ತಾವು ಅಪ್ಪಣೆ ಕೊಟ್ಟರೆ ನಾನು ಅದನ್ನು ಓದುತ್ತೇನೆ. ಇವರು ಕೇಳಿರತಕ್ಕಂತಹದ್ದು.

ತುಮಕೂರು ಜಿಲ್ಲೆ ಸಾಕ್ಷರತಾ ಆಂದೋಳನದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ.

ಅದಕ್ಕೆ ಸಾಕ್ಷರತ ಆಂದೋಳನಾ ಕಾರ್ಯಕ್ರಮದಲ್ಲಿ ಅವ್ಯವಹಾರ ನಡೆದಿರುವುದಾಗಿ ದೂರುಗಳು ಬಂದಿದ್ದು, ಅವುಗಳ ಸತ್ಯಾ-ಅಸತ್ಯತೆ ಬಗ್ಗೆ ಸರ್ಕಾರದಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಹೇಳಿ ಉತ್ತರ ಕೊಟ್ಟಿದ್ದೇವೆ. 2ನೆಯದು ಸಾಕ್ಷರತೆಗೆ ಸಂಬಂಧಿಸಿದಂತೆ, ಒಟ್ಟು ಮುದ್ರಿತವಾದ ಪತ್ರಿಕೆಗಳು ಪುಸ್ತಕಗಳು ಎಷ್ಟು ಎಂದು ಕೇಳಿದ್ದಾರೆ.

ಅಧ್ಯಕ್ಷರು: ದಯಮಾಡಿ ಕೇಳಿ. ಅವರ ಮೊದಲನೆಯ ಪ್ರಶ್ನೆ ಏನಿದೆ, ತುಮಕೂರು ಜಿಲ್ಲೆ, ಸಾಕ್ಷರತಾ ಆಂಧೋಳನಾ ಕಾರ್ಯಕ್ರಮದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಹೌದು ಬಂದಿದೆ, ದೂರುಗಳಿವೆ, ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ. ಉಳಿದ ಎಲ್ಲಾ ವಿವರಗಳನ್ನು ಅವರು ಏನು ಕೊಟ್ಟಿದ್ದಾರೆ ಅಲ್ಲಿ 6 ಕೋಟಿ ಚಿಲ್ಲರೆ ಹಣ ಇತ್ತು, ಸಾಕಷ್ಟು ದುರುಪಯೋಗ ಮಾಡಿದ್ದಾರೆ, ಈ ಪ್ರಶ್ನೆಯನ್ನೂ ಸಹ ಅವರು ಬಾರದಂತೆ ಮಾಡಿದ್ದಾರೆ, ಎನ್ನುವ ಭಾವನೆ ಅವರಿಗೆ ಇದೆ. ತಮ್ಮ ಪರಿಚಯ ನನಗೆ ಇರುವುದರಿಂದ, ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಇಷ್ಟೊಂದು ಹಣ ಇರತಕ್ಕಂತಹದ್ದು, ದೂರು ಬಂದಿದೆ ಎಂದು ಒಪ್ಪಿಕೊಳ್ಳಿತ್ತಿದ್ದೀರಿ. ಇದೊಂದನ್ನು ಸಿ.ಒ.ಡಿ.ಗೆ ಕೊಡಿ ಅಕಸ್ಮಾತ್ ಯಾರಾದರೂ ತಪ್ಪು ಮಾಡಿದ್ದರೆ, ಅಧಿಕಾರಿಗಳು ಸಿಕ್ಕಿಹಾಕಿಕೊಳ್ಳಲಿ. ಬೇರೆಯದಲ್ಲಾದರೆ ತಿನ್ನಲಿ ಈ ಎಜುಕೇಷನ್‌ನಲ್ಲಾರೂ ತಿನ್ನದೆ ಇರಲಿ, ಬೇರೆಯದರಲ್ಲಿ ಕಸ-ಕಡ್ಡಿ ತಿನ್ನಲಿ. ಇದರಲ್ಲಿ ತಿನ್ನದೆ ಇರಲಿ. ಏನು ನಷ್ಟವಾಗುವುದು? ಇದರಿಂದ ನಿಮ್ಮ ಗೌರವ ಹೆಚ್ಚಾಗುತ್ತದೆ ಒಪ್ಪಿಕೊಳ್ಳಿ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್.ಜಿ.ಗೋವಿಂದಗೌಡ : ನಾನು ತಮ್ಮ ಮುಂದೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೋ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಕೆಲವು ವಿಷಯಗಳನ್ನು ಅನುಭವ ಇದೆ ಎಂಬುದಾಗಿ ತಿಳಿಸಿದ್ದೇನೆ ಎಂಬುದಾಗಿ ಅವರು ಏನು ಹೇಳಿದ್ದಾರೆ, ನನಗೂ ಅದರ ಬಗ್ಗೆ ಸತ್ಯಾ-ಅಸತ್ಯತೆ ಬಗ್ಗೆ ವಿಚಾರಣೆ ಆಗಲೇಬೇಕಾಗಿದೆ. ಅಸತ್ಯ ನಡೆದಿದ್ದರೆ, ಅದಕ್ಕೆ ವಿರೋಧವಾಗಿ ಕೆಲಸ ಮಾಡುವುದು, ಆ ಬಗ್ಗೆ ನನಗೆ ಗೌರವ ಉಂಟು. ತಾವು ಏನು ಅಪ್ಪಣೆ ಕೊಡಿಸಿದ್ದೀರಿ? ಇದರ ಬಗ್ಗೆ ವಿಚಾರಣೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ ತಮ್ಮನ್ನು ನಾನು ಅಭಿನಂದಿಸಬೇಕಾಗಿದೆ. ನನ್ನ ಸಹಾಯಕ್ಕೆ ತಾವು ಬಂದಿದ್ದೀರಿ. ಇವತ್ತು ತುಮಕೂರಿನ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ ಎಲ್ಲ ಕಡೆ ಗೋಡೆ ಮೇಲೆ ಬರೆಯತಕ್ಕಂತಹ ಪರಿಸ್ಥಿತಿಗೆ ಹೋಗಿದೆ. ಯಾವ ತರಹದ ವಿಚಾರಣೆ? ಯಾರಿಂದ ವಿಚಾರಣೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು : ಸಿ.ಒ.ಡಿ. ವಿಚಾರಣೆಗೆ ಸಚಿವರು ಒಪ್ಪಿದ್ದಾರೆ. ತಮ್ಮಲ್ಲಿರತಕ್ಕ ಎಲ್ಲಾ ಮಾಹಿತಿಗಳನ್ನು ಅವರಿಗೆ ಒದಗಿಸಿಕೊಡಿ.

ಶ್ರೀ ಹೆಚ್. ಗೋವಿಂದಗೌಡ : ಸಭಾದ್ಯಕ್ಷರ ಅಪ್ಪಣೆ ಮೇರೆಗೆ ಇದನ್ನು ಸಿ.ಒ.ಡಿ.ಗೆ ವಹಿಸುತ್ತೇನೆ.

ಅಧ್ಯಕ್ಷರು : ತಮ್ಮಲ್ಲಿರತಕ್ಕ ಎಲ್ಲಾ ವಿವರಗಳನ್ನು ಅವರಿಗೆ ಕೊಡಿ. ಎಲ್ಲವನ್ನೂ ಇಲ್ಲೇ ಪ್ರಸ್ತಾಪ ಮಾಡುವುದಾದರೆ ಆಪಾದಿತರು ಹುಷಾರಾಗುತ್ತಾರೆ. ವಿಚಾರಣೆ ಮಾಡುವ ಅಧಿಕಾರಿಗಳ ಮುಂದೆ ಆ ಎಲ್ಲ ವಿವರಗಳನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ : ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ತಕ್ಷಣ ಸಂಬಂಧಪಟ್ಟ ಎಲ್ಲ ರೆಕಾರ್ಡುಗಳನ್ನು ಮೊದಲು ತರಿಸಬೇಕು. ಇಲ್ಲದಿದ್ದರೆ ನಾನು ಈ ಮೊದಲೇ ಹೇಳಿದ ಹಾಗೆ ಎಲ್ಲವನ್ನು ತಿದ್ದತಕ್ಕ ಕೆಲಸ ಆಗಿ ಹೋಗುತ್ತದೆ.

ಅಧ್ಯಕ್ಷರು : ಮಾಡುತ್ತಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮದ 262(3)ನೇ ಕಲಮಿನ ಮೇರೆಗೆ ;

1992-93ನೇ ಸಾಲಿನ ಬಿಜಾಪುರ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು : "1995ನೇ ಮಾರ್ಚ್ 20ರಂದು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಶ್ರೀ ಕೆ.ಎನ್.ನಾಗೇಗೌಡರು ಅವರು ದಿನಾಂಕ 22-3-95ರಂದು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ ಈಗ ಸಭಾ ನಾಯಕರು ಉತ್ತರ ನೀಡಬೇಕು.

* ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಈ ಸದನದಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ಹೇಳತಕ್ಕ ಸಂದರ್ಭದಲ್ಲಿ ಗೌರವಾನ್ವಿತ ವಿರೋಧಿ ಪಕ್ಷದ ಮುಖಂಡರುಗಳು ಸರ್ಕಾರ ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವುದಕ್ಕೆ ಮುಂಚೆ ಅವರಿಗೆ ಯಾವ ಜವಾಬ್ದಾರಿಯನ್ನು ನೀವು ನಿರ್ವಹಣೆ ಮಾಡಲಿಕ್ಕೆ ಅವಕಾಶ ಕೊಡುತ್ತೀರಿ ಅದನ್ನು ಮೊದಲು ತಿಳಿಸಿ, ಆಮೇಲೆ ಉತ್ತರ ಹೇಳಬೇಕೆಂದು ಹೇಳಿ ಒಂದು ರೀತಿ ದಿಗ್ಬಂಧನ ಹಾಕಿದ್ದರಿಂದ ಸ್ವಲ್ಪಮಟ್ಟಿಗೆ ಕಸಿವಿಸಿಯಾಯಿತು. ಇವತ್ತು ತಮ್ಮ ಮಧ್ಯಪ್ರವೇಶದಿಂದ ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸನ್ಮಾನ್ಯ ವಿರೋಧಿಪಕ್ಷಗಳ ಎಲ್ಲಾ ಮುಖಂಡರು ಸುಗಮವಾದ ಒಂದು ವರದಿಯನ್ನು ತಾವು ಕೊಟ್ಟಂತಪ ಒಂದು ಸೂಚನೆಯ ಮೇಲೆ ಆ ಹಾದಿಯನ್ನು ಹಿಡಿದು ಕೇವಲ ಕೆಲವು ನಿಮಿಷಗಳು ಸಭಾತ್ಯಾಗ ಮಾಡಿ ಪುನಃ ನಾವು ಸದನಕ್ಕೆ ಬಂದು ಕಾರ್ಯಕಲಾಪದಲ್ಲಿ